- ಮೇ ತಿಂಗಳಲ್ಲಿ 500 ಗ್ರಾಂ ಡೊಲೊಮೈಟ್ ಸುಣ್ಣ ಕೊಡುವುದು.
- ಮೇ ತಿಂಗಳಲ್ಲಿ ಎಲೆಗಳಿಗೆ 0–52–34 (5 ಗ್ರಾಂ/ಲೀ) + 19:19:19 (5 ಗ್ರಾಂ/ಲೀ) + ಪೆಪ್ಪೆರ್ ಸ್ಪೆಶಲ್ (5 ಗ್ರಾಂ/ಲೀ) ಗೊಬ್ಬರ ಸಿಂಪರಣೆ.
- ಹಬ್ಬು ಕುಡಿ ತೆಗೆಯುವುದು.

**–: ಗಮನಿಸಿ :–**

ತೋಟದಲ್ಲಿ ಅಂತರ್ಗತ ಬಸಿಗಾಲುವೆ (ಡ್ರೇನೇಜ್) ವ್ಯವಸ್ಥೆ ಇದ್ದಲ್ಲಿ ಕನಿಷ್ಠ ಒಂದು ಅಡಿಯ ತೆರೆದ ಬಸಿಗಾಲುವೆ ಅವಶ್ಯ

## ರೋಗ ಮತ್ತು ಕೀಟ ನಿರ್ವಹಣೆ

1. ಬುಡ ಕೊಳೆ ರೋಗ (ಕಟ್ಟೆ ರೋಗ)ದ ನಿರ್ವಹಣೆ
   - ಮೇ ಕೊನೇ ವಾರದಲ್ಲಿ ಕಾಪರ್ ಆಕ್ಸಿ ಕ್ಲೋರೈಯ್ಡ್ (ಬ್ಲೈಟೋಕ್ಸ್) 5 ಗ್ರಾಂ/ಲೀ. ನೀರಿನಲ್ಲಿ ಬೆರೆಸಿ 3–5 ಲೀ. ಬುಡದ ಸುತ್ತಲೂ ನೆನೆಸುವುದು.

     ಅಥವಾ

     ಟ್ರೈಕೋಡರ್ಮಾ ಮತ್ತು ಸ್ಯುಡೋಮೊನಾಸ್‌ನ್ನು ಬುಡಕ್ಕೆ ಹಾಕುವುದು.
   - ಜೂನ್ ಮೊದಲನೇ ವಾರದಲ್ಲಿ ಪೊಟ್ಯಾಶಿಯಂ ಫಾಸ್ಫೋನೇಟ್ (4 ಮಿಲಿ/ಲೀ.) ದ್ರಾವಣ ಸಿಂಪರಣೆ ಹಾಗೂ ಬುಡವನ್ನು ನೆನೆಸುವುದು.
   - ಜೂನ್–ಆಗಸ್ಟ್‌ಗಳಲ್ಲಿ ಬಳ್ಳಿಯ ಬುಡದಲ್ಲಿ ನೀರು ನಿಲ್ಲದಂತೆ ಬಸಿಗಾಲುವೆ ಸರಿಯಾಗಿಡುವುದು.
   - ಬಳ್ಳಿಯ ಬುಡದಲ್ಲಿ ಹೆಚ್ಚು ದಪ್ಪಗಿನ ಮುಚ್ಚಿಗೆಯಿದ್ದಲ್ಲಿ ಅದನ್ನು ತೆಳುವಾಗಿ ಹರಡಬೇಕು.
2. ಮೆಣಸಿಗೆ ಬರುವ ಇತರೇ ಕಿಟಬಾಧೆಗಳು.
   - ಎಲೆ ಅಂಚು ಮುರುಟುವುದು: ಇದು ಗಾಲ್ ನುಸಿಯಿಂದ ಬರುವ ರೋಗ.
   - ಹಿಟ್ಟು ತಿಗಣೆಯ ಬಾಧೆಯಿಂದ ಎಲೆ ಹಳದಿಯಾಗುವುದು.
   - ತುದಿ ಕುಡಿ ಕೊರೆಯುವ ಕೀಟ.

     ಇವುಗಳ ಹತೋಟಿಗಾಗಿ ರೋಗೊರ್(2 ಮಿಲಿ/ಲೀ.) ಸಿಂಪರಣೆ ಮಾಡುವುದು ಮತ್ತು ಮೂರು ವಾರಗಳ ನಂತರ ಇನ್ನೊಮ್ಮೆ ಸಿಂಪಡಿಸುವುದು.

–: ಪ್ರಕಟಣೆ : –

**ಟಿ. ಎಂ. ಎಸ್., ಶಿರಸಿ**

ನ್ಯೂ ಮಾರ್ಕೆಟ್ ಯಾರ್ಡ್, ಶಿರಸಿ – 581 402

✆ : 08384 – 236239, 234434 (ಕೃಷಿ ವಿಭಾಗ)

9449628385





# ಅಡಿಕೆ ತೋಟದಲ್ಲಿ ಕಾಳು ಮೆಣಸಿನ ಸುಧಾರಿತ ಬೇಸಾಯ ಕ್ರಮಗಳು

## ನರ್ಸರಿಯಿಂದ ಕೊಯ್ಲಿನವರೆಗಿನ ಬೇಸಾಯ ಕ್ರಮಗಳ ಕೈಪಿಡಿ

: ತಾಂತ್ರಿಕ ಮಾಹಿತಿ :


ಡಾ. ಎಂ. ಎನ್. ವೇಣುಗೋಪಾಲ್

ವಿಶ್ರಾಂತ ವಿಜ್ಞಾನಿಗಳು ಭಾರತೀಯ ಸಾಂಬಾರ ಬೆಳೆಗಳ ಸಂಶೋಧನಾ ಸಂಸ್ಥೆ, ಅಪ್ಪಂಗಳ

: ಪಠ್ಯರೂಪ :

ಶ್ರೀ ಕಿಶೋರ ಹೆಗಡೆ

ಕೃಷಿ ಅಧಿಕಾರಿ, ಟಿ.ಎಂ.ಎಸ್., ಶಿರಸಿ



### ಸೂಕ್ತ ತಳಿಗಳು:

* ಸುಧಾರಿತ ತಳಿಗಳಾದ P-1,P-5,P-7, ಶುಭಕರ ಮತ್ತು ಪಂಚಮಿ ಹಾಗೂ ಸ್ಥಳೀಯ ತಳಿಗಳಾದ ಕರಿಮಲ್ಲಿಸರ, ಬಾಳೆಹಳ್ಳಿ, ಉದ್ದಕರೆ, ಉತ್ತಮ ಇಳುವರಿ ಕೊಡುವ ಸ್ಥಳೀಯ ತಳಿಗಳಾದ ಕುರಿಮಲೆ, ಕುದುರುಗೊಟ್ಟು, ಮಂಚಿಕೆರೆ ಸೆಲೆಕ್ಷನ್ ಇತ್ಯಾದಿ.
* ಹೆಚ್ಚು ಬಿಸಿಲು ಬೀಳದ ತೋಟಗಳಿಗೆ ನೆರಳು ಸಹಿಸುವ ಕರಿಮುಂಡ ಹಾಗೂ ಚೋಮಲ ತಳಿಗಳು ಸೂಕ್ತ.
* ಜೌಗು ಪ್ರದೇಶ ಅಥವಾ ಪ್ರತಿ ವರ್ಷ ನೆರೆ ಬರುವ ಜಾಗದಲ್ಲಿ ತೇವಮ್ ಅಥವಾ ಹಿಪ್ಪಲಿ ಕಸಿ ಗಿಡ ಉತ್ತಮ. ಕಸಿ ಗಿಡ ನೆಡುವುದಾದಲ್ಲಿ ನೀರಾವರಿ ಸೌಲಭ್ಯ ಇರಬೇಕು.

## ಮೊದಲ ವರ್ಷ

### I. ಕಾಳು ಮೆಣಸು ನರ್ಸರಿ :

**1) ಸಸಿಮಡಿಯ ಮಿಶ್ರಣ ತಯಾರಿಕೆ.**

* ಸಸಿಮಡಿಯ ಮಿಶ್ರಣವನ್ನು 2 ಭಾಗ ಫಲವತ್ತಾದ ಮೇಲ್ಮಣ್ಣು, 1 ಭಾಗ ರೇವೆ ಮಣ್ಣು ಅಥವಾ ಮರಳು ಮತ್ತು 1 ಭಾಗ ಕೊಟ್ಟಿಗೆ ಗೊಬ್ಬರ ಇವುಗಳನ್ನು ಬೆರಸಿ ತಯಾರಿಸಬೇಕು. (2:1:1).
* ಇದರಲ್ಲಿ ಇರಬಹುದಾದ ರೋಗಕಾರಕ ಜೀವಾಣುಗಳಿಂದ ಮುಕ್ತಗೊಳಿಸಲು ಈ ಮಿಶ್ರಣವನ್ನು ಒದ್ದೆಮಾಡಿ ಸೌರ ಶಾಖಕ್ಕೆ ಒಳಪಡಿಸಬೇಕು.

**2) ಸೂರ್ಯ ಶಾಖದಿಂದ ಮಿಶ್ರಣವನ್ನು ಉಪಚರಿಸುವುದು (Solarization)**




ಸಸಿಮಡಿ ಮಿಶ್ರಣವನ್ನು 1 ಮೀ ಅಗಲ, 25 ಸೆಂ. ಮೀ. ಎತ್ತರ ಮತ್ತು ಅನುಕೂಲಕರ ಉದ್ದದಲ್ಲಿ (ಕಾಂಕ್ರೀಟ ನೆಲದ ಮೇಲೆ ಅಥವಾ ಪ್ಲಾಸ್ಟಿಕ್ ಹಾಳೆಯ ಮೇಲೆ ಹರಡಿ) ಮಡಿ ತಯಾರಿಸಬೇಕು. ಈ ಮಡಿಗಳು ಪ್ರಖರವಾದ ಸೂರ್ಯ ಪ್ರಕಾಶಕ್ಕೆ ಒಳಪಡುವ ಸ್ಥಳದಲ್ಲಿರಬೇಕು. ಈ ಮಡಿಗಳನ್ನು ಒದ್ದೆಮಾಡಿ ಒಳಭಾಗದಲ್ಲಿ ಹವೆಯಾಡಲು ಅವಕಾಶವಿರದ ರೀತಿಯಲ್ಲಿ ಪಾರದರ್ಶಕವಾದ 100–150 ಗೇಜಿನ ಪ್ಲಾಸ್ಟಿಕ್ ಹಾಳೆಯಿಂದ ಮುಚ್ಚಬೇಕು. ಈ ಮಡಿಗಳ ಎಲ್ಲ ಬದಿಗಳಲ್ಲೂ ಕಲಸಿದ ಮಣ್ಣನ್ನು ಮೆತ್ತಿ ಗಾಳಿಯಾಡದಂತೆ ಮಾಡಬೇಕು. ಇದರಿಂದ ಮಡಿಯ ಒಳಭಾಗದಲ್ಲಿ ಉಷ್ಣತೆ ಅಧಿಕಗೊಂಡು ಮಿಶ್ರಣವು ಸೌರಶಾಖದ ಪ್ರಕ್ರಿಯೆಗೆ ಒಳಪಡುವುದು. 35–45 ದಿನಗಳ ಅವಧಿಯ ಶಾಖ ಪ್ರಕ್ರಿಯೆ ಬಳಿಕ ಮುಚ್ಚಿದ ಪ್ಲಾಸ್ಟಿಕ್ ಹೊದಿಕೆಯನ್ನು ತೆಗೆಯಬೇಕು. ಈ ಕ್ರಿಯೆಯಿಂದ ಮಣ್ಣಿನಲ್ಲಿರುವ ರೋಗಾಣುಗಳು ಕೀಟಗಳು ಹಾಗೂ ಕಳೆಬೀಜಗಳು ನಾಶವಾಗುವವು.

**3) ಮಿಶ್ರಣವನ್ನು ಜೈವಿಕ ಪೀಡೆನಾಶಕಗಳಿಂದ ಉಪಚರಿಸುವುದು**

* ರೋಗಾಣುಗಳ ಸೋಂಕು ತಗಲದಂತಾಗಲು ಈ ಮಿಶ್ರಣಕ್ಕೆ ನಂತರ ಜೈವಿಕ ನಿಯಂತ್ರಕಗಳನ್ನು ಸೇರಿಸಬೇಕು. ಅವು ಯಾವವೆಂದರೆ ಟ್ರೈಕೊಡರ್ಮಾ ಹಾರ್ಜಿಯಾನಮ್ ಅಥವಾ ಟಿ ವಿರಿಡೆ (1ಕಿಲೋ ಸಸಿಮಡಿ ಮಿಶ್ರಣಕ್ಕೆ 1 ಗ್ರಾಂ), ಸುಡೋ ಮೊನಾಸ್ ಫ್ಲೌರೆಸೆನ್ಸ 1 ಲೀಟರ ನೀರಿನಲ್ಲಿ 20 ಗ್ರಾಂನ್ನು ಕದಡಿದ 50 ಮಿಲಿ ದ್ರಾವಣವನ್ನು 1 ಕಿಲೋ ಸಸಿಮಡಿ ಮಿಶ್ರಣಕ್ಕೆ ಸೇರಿಸಬೇಕು.
* VAM ನ್ನು 1 ಕಿಲೋ ಸಸಿಮಡಿ ಮಿಶ್ರಣಕ್ಕೆ 10 ಗ್ರಾಂ ಪ್ರಮಾಣದಲ್ಲಿ , ಪೊಚೊನಿಯಾ ಕ್ಲಾಮಿಡೊಸ್ಪೊರಿಯಾ ( 1–2 ಗ್ರಾಂ/ 1 ಕಿಲೋ ಸಸಿಮಡಿ ಮಿಶ್ರಣಕ್ಕೆ ) ಸೇರಿಸಬೇಕು.
* ಈ ಸಸಿಮಡಿ ಮಿಶ್ರಣವನ್ನು 8x5 ಸೆಂ. ಮೀ. ಅಳತೆಯ ಪ್ಲಾಸ್ಟಿಕ್ ಕೊಟ್ಟೆಗಳಲ್ಲಿ ತುಂಬಬೇಕು ಮತ್ತು ಇವಕ್ಕೆ ನೀರು ಸರಾಗವಾಗಿ ಬಸಿದುಹೋಗುವಂತೆ ಬುಡದಲ್ಲಿ ಸಾಕಷ್ಟು ರಂಧ್ರಗಳಿರಬೇಕು.

**4) ಮೆಣಸಿನ ಕುಡಿಗಳ ತಯಾರಿ**

* ಅಕ್ಟೋಬರ–ಡಿಸೆಂಬರ ತಿಂಗಳಲ್ಲಿ ತಾಯಿ ಬಳ್ಳಿಯ ಬುಡದಿಂದ ಹೊರಟ ಕುಡಿ ಬಳ್ಳಿಯನ್ನು ಮೇಲೆತ್ತಿ ಸುರುಳಿಮಾಡಿ ಒಂದು ಗೂಟಕ್ಕೆ ಸಿಕ್ಕಿಸಬೇಕು. ಇದರಿಂದ ಬಳ್ಳಿ ನೆಲದಲ್ಲಿ ಬೇರೊಡೆಯದಂತಾಗುವುದು. ಮತ್ತು ನೆಲದಿಂದ ಸೋಂಕು ತಗಲದಂತಾಗುವುದು. ಫೆಬ್ರುವರಿ, ಮಾರ್ಚ ತಿಂಗಳುಗಳಲ್ಲಿ ಅವನ್ನು ತಾಯಿ ಬಳ್ಳಿಗಳಿಂದ ಪ್ರತ್ಯೇಕಿಸಬೇಕು. ಈ ಕುಡಿಬಳ್ಳಿಯ ಮಧ್ಯಭಾಗದ ಬಳ್ಳಿಯನ್ನು ನೆಡಲು ಆಯುವುದು ಉತ್ತಮ. ತೀರ ಎಳೆಯದಾದ ಮತ್ತು ತುಂಬ ಬೆಳೆದ (ಕಟ್ಟಿಗೆಯಂತಾದ) ಭಾಗಗಳನ್ನು ಆಯ್ಕೆ ಮಾಡಬಾರದು.
* ಈ ಬಳ್ಳಿಗಳನ್ನು 1–2 ಗಣ್ಣುಗಳಿರುವಂತೆ ಕತ್ತರಿಸಬೇಕು. ಎಲೆಯ ಬುಡದ ದಂಟಿನ ಸ್ವಲ್ಪ ಭಾಗ ಬಿಟ್ಟಿರುವಂತೆ ಎಲೆಗಳನ್ನು ಚಿವುಟಿ ತೆಗೆಯಬೇಕು. ಬಳ್ಳಿಯ ತುಂಡುಗಳನ್ನು ಕಾರ್ಬಂಡೇಜಿಮ್ (2ಗ್ರಾಂ/ಲೀಟರ್) ಅಥವಾ ಸುಡೋಮೊನಾಸ್ ಫ್ಲೌರೆಸೆನ್ಸ



ಕಲ್ಚರನಲ್ಲಿ (250 ಗ್ರಾಂನ್ನು 750 ಮಿಲಿ ನೀರಿಗೆ ಸೇರಿಸಿದ ರಾಡಿ) 20 ನಿಮಿಷಗಳ ಕಾಲ ಅದ್ದಿ ತೆಗೆಯಬೇಕು. ಈ ರೀತಿ ಸಂಸ್ಕರಿಸಿದ 2–3 ತುಂಡುಗಳನ್ನು ಬೇರು ಪ್ರಚೋದಕ (Root promoter-1000 ppm) ಹಚ್ಚಿ ಪ್ರತಿ ಕೊಟ್ಟೆಯಲ್ಲಿ ನೆಡಬೇಕು.
* ಒಂದು ಗಣ್ಣಿನ ಕುಡಿಯನ್ನೂ ನೆಡಬಹುದು. ಹೀಗೆ ಮಾಡಿದಲ್ಲಿ ಬೇರು ಮತ್ತು ಚಿಗುರುಗಳೆರಡೂ ಒಮ್ಮೆಲೇ ಬರುವುದು.

**5) ಕುಡಿಗಳನ್ನು ಪ್ಲಾಸ್ಟಿಕ್ ಕೊಟ್ಟೆಯಲ್ಲಿ ನೆಡುವುದು**

ಫೆಬ್ರುವರಿ ತಿಂಗಳಿನಲ್ಲಿ ಕುಡಿಗಳನ್ನು ಕನಿಷ್ಟ ಒಂದು ಗಣ್ಣಾದರೂ ಮಣ್ಣೊಳಗೆ ಇರುವಂತೆ 8x5 ಸೆಂ. ಮೀ. ಅಳತೆಯ ಪ್ಲಾಸ್ಟಿಕ್




ಕೊಟ್ಟೆಗಳಲ್ಲಿ ನೆಡಬೇಕು. ಕುಡಿಗಳನ್ನು ಎಲ್ಲ ಬದಿಗಳಿಂದಲೂ ಮುಚ್ಚಿರುವ ರೀತಿಯಲ್ಲಿ ಪಾರದರ್ಶಕ ಪ್ಲಾಸ್ಟಿಕ್ ಹಾಳೆ ಹೊದೆಸಿದ ತೇವಯುಕ್ತ ಗೂಡಿನಲ್ಲಿ 20 ದಿನಗಳ ಕಾಲ ಇರುವಂತೆ ಮಾಡಿದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕುಡಿ ಒಡೆಯುವುದು ಮತ್ತು ಪ್ರಾರಂಭದಲ್ಲಿ ಸಸಿಗಳ ಬೆಳವಣಿಗೆಗೆ ಸಹಾಯಕಾರಿಯಾಗುವುದು. ಕುಡಿ ನೆಟ್ಟ ಮೇಲೆ ಸಸಿಗಳಿಗೆ ಚೆನ್ನಾಗಿ ನೆರಳಿರುವಂತೆ ಮಾಡಬೇಕು. 50–75% ನೆರಳ ಬಲೆ ಹೊದಿಸಿದ ಚಪ್ಪರ ಅನುಕೂಲಕರ. ಚಪ್ಪರದೊಳಗೆ ಅಧಿಕ ತೇವಾಂಶ ಮತ್ತು ಸಾಮಾನ್ಯ ಉಷ್ಣತೆಯನ್ನು ಕಾದುಕೊಳ್ಳುವ ನಿಟ್ಟಿನಲ್ಲಿ ಸಾಕಷ್ಟು ನೀರು ಹನಿಸುತ್ತಿರಬೇಕು. ಇದು ಉತ್ತಮ ರೀತಿಯಲ್ಲಿ ಕುಡಿಯೊಡೆಯಲು ಸಹಾಯಕ. 20 ದಿನದ ನಂತರ ಪ್ಲಾಸ್ಟಿಕ್ ಗೂಡಿನ ತಳಭಾಗ ಸ್ವಲ್ಪ ಮೇಲಕ್ಕೆ ಸರಿಸಿ ಗಾಳಿಯಾಡು ವಂತೆ ಮಾಡಿದಲ್ಲಿ ಬೇರು ಬೆಳವಣಿಗೆಗೆ ಅನುಕೂಲ. ಕೊಟ್ಟೆಗಳಲ್ಲಿ ನೀರು ನಿಲ್ಲುವಷ್ಟು ಅತಿಯಾದ ಪ್ರಮಾಣದಲ್ಲಿ ನೀರು ಹನಿಸಬಾರದು. 3–4 ತಿಂಗಳ ವಯಸ್ಸಿನ 3–4 ಎಲೆಗಳನ್ನು ಹೊಂದಿದ ಕುಡಿಗಳನ್ನು ಮೇ–ಜೂನ್ ತಿಂಗಳುಗಳಲ್ಲಿ ನೆಡಬಹುದು. ತೇವಾಂಶ ಹೆಚ್ಚಿರುವ ಪ್ರದೇಶಗಳಲ್ಲಿ ಸಪ್ಟೆಂಬರ ಮೊದಲನೇ ವಾರದಲ್ಲೂ ನಾಟಿ ಮಾಡಬಹುದು.

**6) ಸಸಿಮಡಿಯಲ್ಲಿ ರೋಗ ಮತ್ತು ಕೀಟಬಾಧೆ ತಡೆಯಲು ಕೈಗೊಳ್ಳಬೇಕಾದ ಕ್ರಮಗಳು**

* ಕಾರ್ಬಂಡೇಜಿಮ್+ಮ್ಯಾಂಕೋಜಬ್(ಸ್ಪ್ರಿಂಟ್/ಸಾಫ್) 2.5 ಗ್ರಾಂ ಪ್ರತಿ ಲೀಟರ್ ದ್ರಾವಣವನ್ನು ತಿಂಗಳಿಗೊಮ್ಮೆಯಂತೆ ಎಲೆಗಳ ಮೇಲೆ ಸಿಂಪರಣೆ ಮಾಡಬೇಕು.
* ರೋಗ ಮತ್ತು ಕೀಟಗಳನ್ನು ಹತೋಟಿಯಲ್ಲಿ ಇಡಲು ಒಣಗಿದ ಕುಡಿಗಳನ್ನು ತೆಗೆದು ಸಸಿಮಡಿಯನ್ನು ಸ್ವಚ್ಛವಾಗಿ ಇಟ್ಟಿರುವುದು ಅವಶ್ಯಕ.
* ತಿಂಗಳಿಗೊಮ್ಮೆ ಕ್ಲೋರ್ ಪೈರಿಫಾಸ್ 50%+ ಸೈಪರ ಮೆಥ್ರಿನ್5% ಕೀಟನಾಶಕವನ್ನು 1.5 ಮಿಲಿ ಪ್ರತಿ ಲೀಟರ್ ದ್ರಾವಣವನ್ನು ಸಿಂಪಡಿಸುವುದು.
* ಮೇ ತಿಂಗಳಿನಲ್ಲಿ ಹ್ಯೂಮಿಕ್ ಆಸಿಡ್ 2 ಮಿಲಿ ದ್ರಾವಣವನ್ನು ಒಮ್ಮೆ ಸಿಂಪಡಿಸುವುದು.
* ತಿಂಗಳಿಗೊಮ್ಮೆ ಬಯೋ–20(3 ಮಿಲಿ/ಲೀ) ಅಥವಾ ಎರೆಜಲ (ಒಂದು ಭಾಗಕ್ಕೆ 4 ಭಾಗ ನೀರು ಸೇರಿಸಿದ ದ್ರಾವಣ) ಸಿಂಪಡಿಸುವುದು.

## II. ನಾಟಿ ಕ್ರಮ :

ಮೇ ತಿಂಗಳಲ್ಲಿ ಅಡಿಕೆ ಮರದಿಂದ 30 ಸೆಂ. ಮೀ. ದೂರದಲ್ಲಿ 45 ಸೆಂ.ಮೀ. ಘನಾಕಾರದ ಗುಂಡಿ ತೆಗೆದು ಮೇಲ್ಮಣ್ಣು, 5 ಕೆ.ಜಿ. ಕೊಟ್ಟಿಗೆ ಗೊಬ್ಬರ 150 ಗ್ರಾಂ ರಾಕ್ ಫಾಸ್ಫೇಟ್, 500 ಗ್ರಾಂ ಬೇವಿನ ಹಿಂಡಿ ಮತ್ತು 50 ಗ್ರಾಂ ಟ್ರೈಕೋಡರ್ಮ್‌ವನ್ನು ಹಾಕಿ ಮುಚ್ಚಬೇಕು. ಮಳೆಗಾಲ ಪ್ರಾರಂಭವಾದೊಡನೆ (ಜೂನ್ ಮೊದಲನೇ ವಾರ) ಬೇರು ಕೊಟ್ಟಿರುವ ಕುಡಿಯನ್ನು ನಾಟಿ ಮಾಡಬೇಕು. ಸಸಿ ಕುಣಿಯಲ್ಲಿ ನೀರು ನಿಲ್ಲದ ರೀತಿಯಲ್ಲಿ ನಾಟಿ ಮಾಡಿ ಮುಚ್ಚಿಗೆ ಮಾಡಬೇಕು.



## III. ಕುಡಿಗಳ ಪೋಷಣೆ :

* ಆಗಸ್ಟ್ ತಿಂಗಳಲ್ಲಿ ಆಧಾರ ಮರಕ್ಕೆ ಕುಡಿ ಹಬ್ಬಿಸಿ ಕಟ್ಟುವುದು ಹಾಗೂ ಕುಡಿ ತಿದ್ದುವುದು. ಒಂದು ಮೀಟರ್ ಎತ್ತರ ಬಂದಾಗ ಎಳೆಕುಡಿಯನ್ನು ಚಿವುಟುವುದು.
* ಬಳ್ಳಿಯ ಸುತ್ತಲೂ ಕಳೆ ತೆಗೆದು ಸಪ್ಟೆಂಬರ ತಿಂಗಳಲ್ಲಿ 5 ಕೆ.ಜಿ. ಕೊಟ್ಟಿಗೆ ಗೊಬ್ಬರ, 20 ಗ್ರಾಂ ಯೂರಿಯಾ ಹಾಗೂ 35 ಗ್ರಾಂ ಪೊಟ್ಯಾಷ್‌ನ್ನು ಕೊಡುವುದು.
* ಬಳ್ಳಿ ಮೇಲೆ ಬೆಳೆದಂತೆ ಆಧಾರ ಮರಕ್ಕೆ ಕಟ್ಟುವುದು. ಬಳ್ಳಿ 5 ಅಡಿ ಬೆಳೆದಾಗ ಮತ್ತೆ ಕುಡಿ ಚಿವುಟಿ ತೆಗೆಯುವುದು.
* ಅಕ್ಟೋಬರ ತಿಂಗಳಿನಲ್ಲಿ ಮತ್ತು ನಂತರ ಪ್ರತಿ ಮೂರು ತಿಂಗಳಿಗೊಮ್ಮೆ 19:19:19 ಗೊಬ್ಬರ (5 ಗ್ರಾಂ/ಲೀ.) ಅಥವಾ ಬಯೋ–20 (3 ಮಿಲಿ/ಲೀ.) ಅಥವಾ ಎರೆಜಲ (ಒಂದು ಭಾಗಕ್ಕೆ 4 ಭಾಗ ನೀರು ಸೇರಿಸಿದ ದ್ರಾವಣ) ಅಥವಾ ಗೋಮೂತ್ರ (ಒಂದು ಭಾಗಕ್ಕೆ 9 ಭಾಗ ನೀರು ಸೇರಿಸಿದ ದ್ರಾವಣ) ಬೆರೆಸಿ ಎಲೆಗಳ ಮೇಲೆ ಸಿಂಪಡಿಸುವುದು.
* ನೀರಾವರಿ ವ್ಯವಸ್ಥೆ ಕಲ್ಪಿಸುವುದು.
* ಮೇ ತಿಂಗಳಲ್ಲಿ 250 ಗ್ರಾಂ ಡೊಲೊಮೈಟ್ ಸುಣ್ಣ ಕೊಡುವುದು.

## ಎರಡನೇ ವರ್ಷ

* ಜೂನ್ ತಿಂಗಳಲ್ಲಿ ಟ್ರೈಕೋಡರ್ಮಾ ಮತ್ತು ಸ್ಯೂಡೋಮೊನಾಸ್ ಬೆರೆಸಿದ 0.5–1 ಕಿಲೋ ಬೇವಿನ ಹಿಂಡಿ ಕೊಡುವುದು.
* ಜೊತೆಗೆ 40 ಗ್ರಾಂ ಸಾರಜನಕ (85 ಗ್ರಾಂ ಯೂರಿಯಾ): 17 ಗ್ರಾಂ ರಂಜಕ (100 ಗ್ರಾಂ ರಾಕ್ ಫಾಸ್ಫೇಟ್ ಅಥವಾ SSP): 45 ಗ್ರಾಂ ಪೊಟ್ಯಾಷ್ (75 ಗ್ರಾಂ MOP) ಗೊಬ್ಬರವನ್ನು ಬಳ್ಳಿಯ ಸುತ್ತಲೂ 45 ಸೆಂ. ಮೀ. ದೂರದಲ್ಲಿ ಹರಡುವುದು.
* ಜೂನ್ ಕೊನೆಯ



ವಾರದಲ್ಲಿ ಮೊದಲ ಬೋರ್ಡೋ ಸಿಂಪರಣೆ.

* ಬಸಿಗಾಲುವೆ ಸರಿಯಾಗಿಡುವುದು.
* ಬಳ್ಳಿ ಮೇಲೆ ಬೆಳೆದಂತೆ ಆಧಾರ ಮರಕ್ಕೆ ಕಟ್ಟುವುದು.
* ಅಗಸ್ಟನಲ್ಲಿ ಎರಡನೇ ಬಾರಿ ಬೋರ್ಡೋ ಸಿಂಪರಣೆ.
* ಸಪ್ಟೆಂಬರನಲ್ಲಿ 5 ಕಿಲೋ ಕಾಂಪೋಸ್ಟ್ ಗೊಬ್ಬರ ಕೊಡುವುದು. ಜೊತೆಗೆ 40 ಗ್ರಾಂ ಸಾರಜನಕ (85 ಗ್ರಾಂ ಯೂರಿಯಾ) : 17 ಗ್ರಾಂ ರಂಜಕ(100 ಗ್ರಾಂ ರಾಕ್ ಫಾಸ್ಫೇಟ್ ಅಥವಾ SSP): 45 ಗ್ರಾಂ ಪೊಟ್ಯಾಷ್ (75 ಗ್ರಾಂ MOP) ಗೊಬ್ಬರವನ್ನು ಬಳ್ಳಿಯ ಸುತ್ತಲೂ 45 ಸೆಂ.ಮೀ. ದೂರದಲ್ಲಿ ಹರಡುವುದು.
* ಬುಡಕ್ಕೆ ಮಣ್ಣೇರಿಸುವುದು ಮತ್ತು ಮುಚ್ಚಿಗೆ ಮಾಡುವುದು.
* ನೀರಾವರಿ ವ್ಯವಸ್ಥೆ ಕಲ್ಪಿಸುವುದು.
* ಮೇ ತಿಂಗಳಲ್ಲಿ 500 ಗ್ರಾಂ ಡೊಲೊಮೈಟ್ ಸುಣ್ಣ ಕೊಡುವುದು
* ಹಬ್ಬು ಕುಡಿ ತೆಗೆಯುವುದು.

**ಮೂರನೇ ವರ್ಷ**

* ಜೂನ್ ತಿಂಗಳಲ್ಲಿ ಟ್ರೈಕೋಡರ್ಮಾ ಮತ್ತು ಸ್ಯೂಡೋ ಮೊನಾಸ್ ಬೆರೆಸಿದ 0.5–1 ಕಿಲೋ ಬೇವಿನ ಹಿಂಡಿ ಮತ್ತು 5 ಕಿಲೋ ಕಾಂಪೋಸ್ಟ್ ಗೊಬ್ಬರ ಕೊಡುವುದು
* ಜೊತೆಗೆ 60 ಗ್ರಾಂ ಸಾರಜನಕ (130 ಗ್ರಾಂ ಯೂರಿಯಾ): 25 ಗ್ರಾಂ ರಂಜಕ (135 ಗ್ರಾಂ ರಾಕ್ ಫಾಸ್ಫೇಟ್ ಅಥವಾ SSP): 70 ಗ್ರಾಂ ಪೊಟ್ಯಾಷ್ (115 ಗ್ರಾಂ MOP) ಗೊಬ್ಬರವನ್ನು ಬಳ್ಳಿಯ ಸುತ್ತಲೂ 45 ಸೆಂ. ಮೀ. ದೂರದಲ್ಲಿ ಹರಡುವುದು.
* ಜೂನ್ ಕೊನೆಯ ವಾರದಲ್ಲಿ ಮೊದಲ ಬೋರ್ಡೋ ಸಿಂಪರಣೆ
* ಬಸಿಗಾಲುವೆ ಸರಿಯಾಗಿಡುವುದು.
* ಬಳ್ಳಿ ಮೇಲೆ ಬೆಳೆದಂತೆ ಆಧಾರ ಮರಕ್ಕೆ ಕಟ್ಟುವುದು.
* ಅಗಸ್ಟನಲ್ಲಿ ಎರಡನೇ ಬಾರಿ ಬೋರ್ಡೋ ಸಿಂಪರಣೆ
* ಸಪ್ಟೆಂಬರನಲ್ಲಿ 5 ಕಿಲೋ ಕಾಂಪೋಸ್ಟ್ ಗೊಬ್ಬರ ಕೊಡುವುದು.
* 60 ಗ್ರಾಂ ಸಾರಜನಕ (130 ಗ್ರಾಂ ಯೂರಿಯ) : 25 ಗ್ರಾಂ ರಂಜಕ (135 ಗ್ರಾಂ ರಾಕ್ ಫಾಸ್ಫೇಟ್ ಅಥವಾ SSP): 70 ಗ್ರಾಂ ಪೊಟ್ಯಾಷ್ (115 ಗ್ರಾಂ MOP) ಗೊಬ್ಬರವನ್ನು ಬಳ್ಳಿಯ ಸುತ್ತಲೂ 45 ಸೆಂ.ಮೀ. ದೂರದಲ್ಲಿ ಹರಡುವುದು.
* ಬುಡಕ್ಕೆ ಮಣ್ಣೇರಿಸುವುದು ಮತ್ತು ಮುಚ್ಚಿಗೆ ಮಾಡುವುದು. (ಜನವರಿ – ಎಪ್ರಿಲ್)



* ನೀರಾವರಿ ವ್ಯವಸ್ಥೆ ಕಲ್ಪಿಸುವುದು.
* ಮೇ ತಿಂಗಳಲ್ಲಿ 500 ಗ್ರಾಂ ಡೊಲೊಮೈಟ್ ಸುಣ್ಣ ಕೊಡುವುದು.
* ಮೇ ತಿಂಗಳಲ್ಲಿ ಎಲೆಗಳಿಗೆ ಗೊಬ್ಬರ ಸಿಂಪರಣೆ, 0–52–34 5 ಗ್ರಾಂ/ಲೀ+19:19:19 5 ಗ್ರಾಂ/ಲೀ +ಪೆಪ್ಪೆರ್ ಸ್ಪೆಶಲ್ 5 ಗ್ರಾಂ ಲೀ.
* ಹಬ್ಬು ಕುಡಿ ತೆಗೆಯುವುದು/ ಮೇಲೆತ್ತಿ ಕಟ್ಟುವುದು (ಕುಡಿ ತಿದ್ದುವುದು)

**ನಾಲ್ಕನೇ ವರ್ಷದಿಂದ ಪ್ರತಿ ವರ್ಷ**

* ಜೂನ್ ತಿಂಗಳಲ್ಲಿ ಟ್ರೈಕೋಡರ್ಮಾ ಮತ್ತು ಸ್ಯೂಡೋ ಮೊನಾಸ್ ಬೆರೆಸಿದ ಒಂದು ಕಿಲೋ ಬೇವಿನ ಹಿಂಡಿ ಮತ್ತು 5 ಕಿಲೋ ಕಂಪೋಸ್ಟ್ ಗೊಬ್ಬರ ಕೊಡುವುದು.
* ಜೊತೆಗೆ 40 ಗ್ರಾಂ ಸಾರಜನಕ (90 ಗ್ರಾಂ ಯೂರಿಯಾ): 25 ಗ್ರಾಂ ರಂಜಕ (135 ಗ್ರಾಂ ರಾಕ್ ಫಾಸ್ಫೇಟ್ ಅಥವಾ SSP): 70 ಗ್ರಾಂ ಪೊಟ್ಯಾಷ್ (115 ಗ್ರಾಂ MOP) ಗೊಬ್ಬರವನ್ನು ಬಳ್ಳಿಯ ಸುತ್ತಲೂ 45 ಸೆಂ.ಮೀ. ದೂರದಲ್ಲಿ ಹರಡುವುದು.
* ಜೂನ್ ಕೊನೆಯ ವಾರದಲ್ಲಿ ಮೊದಲ ಬೋರ್ಡೋ ಸಿಂಪರಣೆ.
* ಬಸಿಗಾಲುವೆ ಸರಿಯಾಗಿಡುವುದು.
* ಬಳ್ಳಿ ಮೇಲೆ ಬೆಳೆದಂತೆ ಆಧಾರ ಮರಕ್ಕೆ ಕಟ್ಟುವುದು.
* ಅಗಸ್ಟನಲ್ಲಿ ಎರಡನೇ ಬಾರಿ ಬೋರ್ಡೋ ಸಿಂಪರಣೆ.
* ಸಪ್ಟೆಂಬರ–ಅಕ್ಟೋಬರ ತಿಂಗಳಲ್ಲಿ ಎಲೆಗಳಿಗೆ ಬಯೋ–20 (3 ಮಿಲಿ/ಲೀ)+13–0–45 (5 ಗ್ರಾಂ/ಲೀ)ನಂತೆ ಗೊಬ್ಬರ ಸಿಂಪರಣೆ.
* 60 ಗ್ರಾಂ ಸಾರಜನಕ (130 ಗ್ರಾಂ ಯೂರಿಯಾ): 25 ಗ್ರಾಂ ರಂಜಕ(135 ಗ್ರಾಂ ರಾಕ್ ಫಾಸ್ಫೇಟ್ ಅಥವಾ SSP): 70 ಗ್ರಾಂ ಪೊಟ್ಯಾಷ್ (115 ಗ್ರಾಂ MOP) ಗೊಬ್ಬರವನ್ನು ಬಳ್ಳಿಯ ಸುತ್ತಲೂ 45 ಸೆಂ.ಮೀ. ದೂರದಲ್ಲಿ ಹರಡುವುದು.
* ಬಳ್ಳಿ ಮೇಲೆ ಬೆಳೆದಂತೆ ಆಧಾರ ಮರಕ್ಕೆ ಕಟ್ಟುವುದು.
* ಬುಡಕ್ಕೆ ಮಣ್ಣೇರಿಸುವುದು ಮತ್ತು ಮುಚ್ಚಿಗೆ ಮಾಡುವುದು.
* ನೀರಾವರಿ ವ್ಯವಸ್ಥೆ ಕಲ್ಪಿಸುವುದು.
* ಜನವರಿ–ಫೆಬ್ರುವರಿಯಲ್ಲಿ ಕೊಯ್ಲು ಮಾಡುವುದು ಮತ್ತು ಸಂಸ್ಕರಣೆ : 10–15% ಹಣ್ಣಾದಾಗ 2–3 ಹಂತದಲ್ಲಿ ಕೊಯ್ಲು ಮಾಡುವುದು.

**ಕೊಯ್ಲೋತ್ತರ ಸಂಸ್ಕರಣೆ:**

ಕಪ್ಪು ಕಾಳು ಮಾಡುವ ಸುಧಾರಿತ ತಂತ್ರಜ್ಞಾನ:

1. ಬಿಡಿಸಿದ ಕಾಳುಗಳನ್ನು ಚೆನ್ನಾಗಿ ಬಿಸಿಲು ಬರುವ ಜಾಗದಲ್ಲಿ ನೆರಳು ಪರದೆಯ ಮೇಲೆ 2.0–2.5 ಸೆಂ.ಮೀ. ದಪ್ಪ ಹರಡಿ ಪಾರದರ್ಶಕ ಪ್ಲಾಸ್ಟಿಕ್ ಹಾಳೆಯಿಂದ ಮುಚ್ಚಬೇಕು. ಸಂಜೆ 4–5 ಗಂಟೆಗೆ ಕಾಳುಗಳನ್ನು ಒಟ್ಟು ಮಾಡಿ ಪ್ಲಾಸ್ಟಿಕ್ ಹಾಳೆಯಿಂದ ಮುಚ್ಚುವುದು. ನಂತರದ 3–4 ದಿನ ಕಾಳುಗಳನ್ನು ತೆರೆದ ಬಿಸಿಲಿಗೆ ಒಣಗಿಸುವುದು. ಹೀಗೆ ಮಾಡಿದಲ್ಲಿ ಕಾಳು ಕಡು ಕಪ್ಪು ಬಣ್ಣ ಪಡೆದುಕೊಳ್ಳುತ್ತದೆ.

ಅಥವಾ

2. ಬಿಸಿ ನೀರಿನಲ್ಲಿ ಅದ್ದಿ ತೆಗೆಯುವುದು (Blanching): ಕಾಳುಗಳನ್ನು ಬಿಸಿ ನೀರಿನಲ್ಲಿ ಒಂದು ನಿಮಿಷ ಅದ್ದಿ ತೆಗೆದು ಒಣಗಿಸುವುದು. ಬೋಳಕಾಳು ಮೆಣಸು ಮಾಡಲು ಹಣ್ಣಾದ ಕಾಳುಗಳನ್ನು ಪ್ರತ್ಯೇಕಿಸಿ ನೀರಿನಲ್ಲಿ 10–12 ದಿನ ಕೊಳೆಸಬೇಕು. ಹೀಗೆ ಮಾಡುವಾಗ ನೀರನ್ನು ಪ್ರತಿ ದಿನ ಬದಲಾಯಿಸಬೇಕು. ನಂತರ ಸಿಪ್ಪೆಯನ್ನು ಬೇರ್ಪಡಿಸಿ 2–3 ದಿನ ಬಿಸಿಲಲ್ಲಿ ಒಣಗಿಸಬೇಕು.